ಶ್ರೀ ಜಿ. ಬಸವಣ್ಣಪ್ಪ.—ಸ್ವರ್ಣ ಯೋಜನೆಯ ಬಗ್ಗೆ ಮಾನ್ಯ ನೀರಾವರಿ ಸಚಿವರ ಗಮನಕ್ಕೆ ವಿಷಯವನ್ನು ತಂದು ಸೂಕ್ತ ಉತ್ತರವನ್ನು ಕೊಡಲು ವ್ಯವಸ್ಥೆ ಮಾಡುತ್ತೇನೆ.

೧೩. ಬಿಜಾಪುರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯಾದ ಶ್ರೀ ವಿರೂಪಾಕ್ಷಪ್ಪರವರ ಮೇಲೆ ಇರತಕ್ಕ ಆಪಾದನೆಗಳು

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಬಿಜಾಪುರದಲ್ಲಿ ವಿರೂಪಾಕ್ಷಪ್ಪ ಎಂಬವರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯಾಗಿದ್ದು, ಅಧ್ಯಕ್ಷತೆಗೆ ಹೇಳಿ ಮಾಡಿಸಿದಂತಹ ವ್ಯಕ್ತಿ ಎಂದರೂ ಅಡ್ಡಿಯಿಲ್ಲ. ಈ ಅಧಿಕಾರಿಯು ವಿರೋಧ ಹಲವಾರು ಆಪಾದನೆಗಳು ಇದ್ದು, ನೌಕರರು ಅನೇಕ ಸಲ ಈತನ ವಿರುದ್ಧ ದಂಗೆ ಎದ್ದಿದ್ದಾರೆ.

ದೇಶಕ್ಕೆ ಅತ್ಯಂತ ಅವಶ್ಯವಾಗಿರುವ ಕುಟುಂಬ ಯೋಜನೆಯ ಕುರಿತು ಈ ವ್ಯಕ್ತಿಗೆ ಏಳ್ಗೆಯೂ ಆಸ್ಥೆಯಿಲ್ಲ. ತಮ್ಮ ನಿದರ್ಶನಕ್ಕೆ ಹೇಳಬೇಕೆಂದರೆ, ದಿನಾಂಕ, ೧೧-೧೨-೧೯೮೬ ರಂದು ಸಾವಳಗಿಯಲ್ಲಿ ಒಂದು ಲೆಪ್ರೋಸ್ಕೋಪಿಕ್ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕಾದ ಮಹಿಳೆಯರು ಅಂದು ಮುಂಜಾನೆ ೮ ಘಂಟೆಗೆ ಬರೀ ಹೊಟ್ಟೆಯಲ್ಲಿ ಬಂದು ಕಾಯಿತಿದ್ದರು. ಸಂಜೆಯ ವರೆಗೆ ಈ ಮಹಿಳೆಯರು ಕಾಯಬೇಕಾಯಿತು. ಅಲ್ಲಿಯ ಸಮಾಜಕಾರ್ಯಕರ್ತರು ಜಗಳ ತೆಗೆದು ಗಲಾಟೆ ಮಾಡಿದ ನಂತರ ರಾತ್ರಿ ೧೦ ಘಂಟೆಗೆ ಶಸ್ತ್ರಚಿಕಿತ್ಸೆ ತಜ್ಞರನ್ನು ಕರೆಸಲಾಯಿತು.

ಎರಡನೇ ಶಿಬಿರ ೨೬-೧೨-೧೯೮೬ ರಂದು ನಡೆಯಿತು. ಮುಂಜಾನೆ ಶಸ್ತ್ರಕ್ರಿಯೆ ಎಂದು ಮಹಿಳೆಯರಿಗೆ ಹೇಳಿದ್ದರೂ ಸಹ ರಾತ್ರಿ ೮ ಘಂಟೆಗೆ ಕೆಲಸ ಆರಂಭವಾಯಿತು. ಬೆಳಗಿನಿಂದ ಕಾದ ಮಹಿಳೆಯರು ಸುಸ್ತಾಗಿ ಹೋಗಿದ್ದರು. ಹೀಗೇಕೆ ಎಂದು ಜನರು ಕೇಳಿದರೆ, ನಮ್ಮ ವ್ಯವಸ್ಥೆಯೇ ಹೀಗೆ ಎಂದು ಲೇವಡಿ ಮಾಡಿದರು. ಮೂರನೇ ಸಲ ಎ.ಸಿ. ಮತ್ತು ತಹಶೀಲ್ದಾರರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ಅಧಿಕಾರಿಗಳು ಕೂಡಿ ಕೆಲಸ ಮಾಡಿದಾಗ ೮೨ ಜನರಿಗೆ ಶಸ್ತ್ರಚಿಕಿತ್ಸೆ ಮಾಡಿಸಲಾಯಿತು.

ಹೀಗೆ ಕುಟುಂಬ ಯೋಜನೆಯಂತಹ ರಾಷ್ಟ್ರೀಯ ಕಾರ್ಯಕ್ರಮದ ವಿಷಯದಲ್ಲಿ ಅನಾಸಕ್ತಿ ಅನಾದರ ತೋರುವ ಈ ಅಧಿಕಾರಿ ಎಮ್ಮಿಯವರ ವಿರೋಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸೂಕ್ತ ಉತ್ತರವನ್ನು ತರಿಸಿ ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

೧೪. ಪುತ್ತೂರು ತಾಲ್ಲೂಕು ನೆಟ್ಟಣಿಗೆ ಮತ್ತು ಮುಡ್ನೂರು ಗ್ರಾಮಗಳ ಪ್ರಾಥಮಿಕ ಆರೋಗ್ಯ ಘಟಕಕ್ಕೆ ವೈದ್ಯಾಧಿಕಾರಿಗಳ ನೇಮಕಾತಿ.

ಶ್ರೀ ವಿನಯಕುಮಾರ್ ಸೊರಕೆ.—ಪುತ್ತೂರು ತಾಲ್ಲೂಕಿನ ನೆಟ್ಟಣಿಗೆ ಮುಡ್ನೂರು ಗ್ರಾಮದ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಕಳೆದ ಎರಡು ವರ್ಷದಿಂದ ವೈದ್ಯಾಧಿಕಾರಿಯವರು ಇಲ್ಲದೆ ಇರುವುದರಿಂದ ಹೆಚ್ಚಿಗೆ ತೊಂದರೆ ಸಾರ್ವಜನಿಕರಿಗೆ ಆಗಿದೆ. ನೆಟ್ಟಣಿಗೆ ಮುಡ್ನೂರು ಪರಿಸರದ ಗ್ರಾಮಗಳ ಅತೀ ಹಿಂದುಳಿದ ಪ್ರದೇಶವಾಗಿದ್ದು, ಆರ್ಥಿಕವಾಗಿ ಹಿಂದುಳಿದ ಜನರು ಈ ಪರಿಸರದಲ್ಲಿ ವಾಸ್ತವ್ಯವಾಗಿದ್ದು, ಇದು ಕೇರಳ ರಾಜ್ಯ ಹಾಗೂ ಕರ್ನಾಟಕ ರಾಜ್ಯದ ಗಡಿ ಪ್ರದೇಶವು ಆಗಿರುತ್ತದೆ. ಆದುದರಿಂದ ಪ್ರಾಥಮಿಕ ಆರೋಗ್ಯ ಘಟಕ ನೆಟ್ಟಣಿಗೆ ಮುಡ್ನೂರಿಗೆ ವೈದ್ಯಾಧಿಕಾರಿಯ ನೇಮಕಾತಿಯನ್ನು ಶೀಘ್ರವಾಗಿ ಮಾಡಿ ಈ ಪರಿಸರಕ್ಕೆ ಇದರ ಅನುಕೂಲತೆ ದೊರೆಯುವಂತೆ ಮಾಡಬೇಕಾಗಿ ತಮ್ಮ ಮುಖಾಂತರ ಆರೋಗ್ಯ ಹಾಗೂ ಅಬಕಾರಿ ಮಂತ್ರಿಯವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಚ್ ಟಿ. ಕೃಷ್ಣಪ್ಪ.—ವಿಷಯಕ್ಕೆ ಸಂಬಂಧಪಟ್ಟ ಮಾಹಿತಿ ಬಂದಮೇಲೆ, ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತೇನೆ.